ಕರ್ನಾಟಕ ಸರ್ಕಾರ
ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ದಿನಾಂಕ : 26-09-2014

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಜವಳಿ, ಬಂದರು, ಒಳನಾಡು ಜಲಸಾರಿಗೆ ಸಚಿವರಾದ ಶ್ರೀ ಬಾಬೂರಾವ್ ಚಿಂಚನಸೂರು ಅವರಿಂದ ಪತ್ರಿಕಾಗೋಷ್ಠಿ | 27-09-2014<br>ಶನಿವಾರ<br>ಅಪರಾಹ್ನ<br>12-00 ಗಂಟೆಗೆ | ಕೊಠಡಿ ಸಂಖ್ಯೆ 222,<br>ವಿಕಾಸಸೌಧ,<br>ಬೆಂಗಳೂರು. |
| 2. | **World Tourism Day – 2014:**<br>1) **Inauguration of two newly developed eco-trails operated by Jungle Lodges & Resorts.**<br>2) **Launching " Adopt-A-Destination" program.**<br><br>**By:**<br><br>**Sri R.V. Deshpande,**<br>**Minister for Higher Education and Tourism.** | 27-09-2014<br>**Saturday**<br>**4-00 PM** | **Topaz Hall,**<br>**J.W. Marriott Hotel**<br>**(Next to UB City)**<br>**Bangalore** |
| 3. | ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕರ್ನಾಟಕ ಚಿತ್ರಕಲಾ ಪರಿಷತ್ ಆಶ್ರಯದಲ್ಲಿ ಎರಡು ದಿನಗಳ "ಮಾಹಿತಿ ಮನರಂಜನೆ" ಕಾರ್ಯಕ್ರಮ. | 27-09-2014<br>ಶನಿವಾರ<br>ಸಂಜೆ<br>6-00 ಗಂಟೆಗೆ | ಕರ್ನಾಟಕ ಚಿತ್ರಕಲಾ ಪರಿಷತ್ತು,<br>ಕುಮಾರ ಕೃಪಾ ರಸ್ತೆ,<br>ಬೆಂಗಳೂರು |

ನಿರ್ದೇಶಕರ ಪರವಾಗಿ

## ಪತ್ರಿಕಾ ಪ್ರಕಟಣೆ

# ಅಕ್ಟೋಬರ್ 2 ರಂದು
# ಗಾಂಧಿ ಜಯಂತಿ – ಅಹಿಂಸಾ ಮಹೋತ್ಸವ

**ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)**

ಮಹಾತ್ಮ ಗಾಂಧಿ ಜಯಂತಿ ಹಾಗೂ ಅಂತಾರಾಷ್ಟ್ರೀಯ ಅಹಿಂಸಾ ದಿನಾಚರಣೆಯ ಪ್ರಯುಕ್ತ ದೂರದರ್ಶನ ಕೇಂದ್ರ, ಆಕಾಶವಾಣಿ ಸರ್ವೋದಯ ಇಂಟರ್ ನ್ಯಾಷನಲ್ ಟ್ರಸ್ಟ್, ರಾಜ ಭವನ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ಹಾಗೂ ವಿಜಯವಾಣಿ ದಿನ ಪತ್ರಿಕೆ, ಇವರ ಸಂಯುಕ್ತಾಶ್ರಯದಲ್ಲಿ ಅಕ್ಟೋಬರ್ 2 ರಂದು ಸಂಜೆ 6–00 ರಿಂದ 7–30 ಗಂಟೆವರೆಗೆ ರಾಜಭವನದ ಗಾಜಿನ ಮನೆಯಲ್ಲಿ ಹಮ್ಮಿಕೊಳ್ಳಲಾಗಿರುವ ಗಾಂಧಿ ಜಯಂತಿ – ಅಹಿಂಸಾ ಮಹೋತ್ಸವದಲ್ಲಿ, ನೃತ್ಯ ಹಾಗೂ ಗೀತ ನಮನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಈ ಕಾರ್ಯಕ್ರಮದಲ್ಲಿ ಘನತೆವೆತ್ತ ರಾಜ್ಯಪಾಲ ಶ್ರೀ ವಜುಭಾಯಿ ರೂಡಭಾಯಿ ವಾಲಾ, ಕರ್ನಾಟಕ ವಿಧಾನ ಪರಿಷತ್ ಅಧ್ಯಕ್ಷ್ಯ ಶ್ರೀ ಡಿ.ಹೆಚ್. ಶಂಕರಮೂರ್ತಿ, ಕರ್ನಾಟಕ ಲೋಕಾಯುಕ್ತ ಜಸ್ಟಿಸ್ ಡಾ. ವೈ. ಭಾಸ್ಕರ್ ರಾವ್, ಬ್ರಿಟನ್ ಡೆಪ್ಯುಟಿ ಕಮಿಷನರ್ ಶ್ರೀ ಇಯಾನ್ ಫೆಲ್ಪನ್, ಫ್ರಾನ್ಸ್ ಕನ್ಸುಲೇಟ್‌ನ ಕೌನ್ಸಲ್ ಜನರಲ್ ಶ್ರೀ ಎರಿಕ್ ಲವೆರ್ತು, ಗಾಂಧಿ ಸ್ಮಾರಕ ನಿಧಿ ಅಧ್ಯಕ್ಷ ಶ್ರೀ ಹೆಚ್. ಎಸ್. ದೊರೆಸ್ವಾಮಿ, ಭಾರತೀಯ ವಿದ್ಯಾಭವನ ಅಧ್ಯಕ್ಷ ಶ್ರೀ ಎನ್. ರಾಮಾನುಜ, ಬಸವ ಸಮಿತಿ ಅಧ್ಯಕ್ಷ ಶ್ರೀ ಅರವಿಂದ್ ಜತ್ತಿ, ಸೆಂಚ್ಯುರಿ ಬಿಲ್ಡಿಂಗ್ ಪ್ರೈ. ಲಿ.ನ ವ್ಯವಸ್ಥಾಪಕ ನಿರ್ದೇಶಕ ಡಾ. ದಯಾನಂದ ಪೈ ಹಾಗೂ ಸರ್ವೋದಯ ಇಂಟರ್ ನ್ಯಾಷನಲ್ ಟ್ರಸ್ಟ್‌ನ ಮ್ಯಾನೇಜಿಂಗ್ ಟ್ರಸ್ಟೀ ಶ್ರೀ ಪಿ.ವಿ. ನಝರಥ್ ಅವರು ಉಪಸ್ಥಿತರಿರುವರು.

ಪಿಹೆಚ್:ಬಿಜಿಪಿ:ಜಿಪಿಆರ್.

# ಮಾರ್ಸ್ ರೋವರ್ ಮಾದರಿ ತಯಾರಿಕೆ ಕುರಿತು ಕಾರ್ಯಾಗಾರ

**ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)**

ಜವಾಹರ ನೆಹರೂ ತಾರಾಲಯವು ಮಾರ್ಸ್ ರೋವರ್ ಮಾದರಿಯನ್ನು ತಯಾರಿಸುವ ಕುರಿತು 6ನೇ ತರಗತಿಯಿಂದ 10ನೇ ತರಗತಿವರೆಗಿನ ಶಾಲಾ ಮಕ್ಕಳಿಗಾಗಿ ಒಂದು ಗಂಟೆಯ ಕಾರ್ಯಾಗಾರವನ್ನು ಸೆಪ್ಟೆಂಬರ್ 28 ರಂದು ಮಧ್ಯಾಹ್ನ 3–30 ರಿಂದ 4–30 ಗಂಟೆವರೆಗೆ ಹಮ್ಮಿಕೊಂಡಿದೆ.

ಈ ತರಬೇತಿಯು 30 ಅಭ್ಯರ್ಥಿಗಳಿಗೆ ಮಾತ್ರ ಸೀಮಿತವಾಗಿರುವುದರಿಂದ ಮೊದಲು ಹೆಸರು ನೋಂದಾಯಿಸಿಕೊಂಡ ವಿದ್ಯಾರ್ಥಿಗಳಿಗೆ ಅವಕಾಶ ನೀಡಲಾಗುವುದು. ಆದ್ದರಿಂದ ಶನಿವಾರದೊಳಗೆ ಖುದ್ದಾಗಿ ಅಥವಾ ಇ ಮೇಲ್ – info@taralaya.org ಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು. ಹೆಚ್ಚಿನ ಮಾಹಿತಿಗೆ ದೂರವಾಣಿ ಸಂಖ್ಯೆ 22379725 ಮತ್ತು 22266084 ಅಥವಾ ವೆಬ್‌ಸೈಟ್ htttp://www.taralaya.org ಅನ್ನು ಸಂಪರ್ಕಿಸಬಹುದಾಗಿದೆ ಎಂದು ನೆಹರೂ ತಾರಾಲಯ ಪ್ರಕಟಣೆ ತಿಳಿಸಿದೆ.

ಪಿಹೆಚ್:ಬಿಜಿಪಿ:ಜಿಪಿಆರ್.

# MARS ROVER

Bangalore, September 26 (Karnataka Information)

Jawaharlal Nehru Planetarium will conduct a one hour workshop, for 6 th to 10 th Standard Students involving prepration of models of rovers on 28th September, between 3-30 PM to 4-30 PM.

Interested students can register on or before Satruday, September 27, 2014 in person or by email- info@taralaya.org. A maximum of 30 students in a batch can be accommodated on a first-come-served basis. Further details may be obtained from Jawaharlal Nehru Planetarium on 2237 9725/ 2226 6084 or visit website: http://www.taralaya.prg/announcements.php.

ph:bgp.gpr

# ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನಸಹಾಯ

**ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)**

2014-15 ಸಾಲಿನ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ಶಿಕ್ಷಕರ ಮಕ್ಕಳ ಉನ್ನತ ವ್ಯಾಸಂಗಕ್ಕೆ ಧನ ಸಹಾಯ ನೀಡುವ ಸಲುವಾಗಿ ರಾಷ್ಟ್ರೀಯ ಶಿಕ್ಷಕರ ಕಲ್ಯಾಣ ಪ್ರತಿಷ್ಠಾನದಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಅರ್ಹ ಶಿಕ್ಷಕರು (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣದ ವ್ಯಾಪ್ತಿಯ) ಆಯಾ ವಲಯ ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ ನಿಧಿಗಳ ಕಚೇರಿಗೆ ಭರ್ತಿ ಮಾಡಿದ ಅರ್ಜಿಗಳನ್ನು ದಿನಾಂಕ 31–10–2014 ರ ಒಳಗಾಗಿ ಸಲ್ಲಿಸಲು ತಿಳಿಸಿದೆ.

ಪದವಿ ಪೂರ್ವ ಕಾಲೇಜುಗಳು ಹಾಗೂ ಮೇಲ್ಪಟ್ಟ ವಿದ್ಯಾಸಂಸ್ಥೆಗಳ ಉಪನ್ಯಾಸಕರುಗಳು ಮತ್ತು ಪ್ರಾಚಾರ್ಯರು ಅವರ ಮೇಲಾಧಿಕಾರಿಗಳ ಮುಖಾಂತರ ದಿನಾಂಕ: 31–10–2014 ರೊಳಗೆ ಅರ್ಜಿಗಳನ್ನು ಸಲ್ಲಿಸಬೇಕು. ಅರ್ಜಿ / ನಮೂನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂಗಜಾಲದಿಂದ (www.schooleducation.kar.nic.in) ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಗದಿ ಪಡಿಸಿರುವ ಅಂತಿಮ ದಿನಾಂಕದ ನಂತರ ಬರುವ ಅರ್ಜಿಗಳನ್ನು ಹಾಗೂ ಅಪೂರ್ಣ ಮಾಹಿತಿ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

ಪಿಹೆಚ್.:ಜಿಪಿಆರ್.

## ಶಿಕ್ಷಕರ ಮಕ್ಕಳಿಗೆ ಪ್ರತಿಭಾವಂತ ವಿದ್ಯಾರ್ಥಿ ವೇತನ

**ಬೆಂಗಳೂರು, ಸೆಪ್ಟೆಂಬರ್ 26, (ಕರ್ನಾಟಕ ವಾರ್ತೆ)**

2014-15 ಸಾಲಿನ ಕರ್ನಾಟಕ ರಾಜ್ಯ ಶಿಕ್ಷಕರ ಕಲ್ಯಾಣ ನಿಧಿಯ ವತಿಯಿಂದ ಜಿಲ್ಲಾ/ವಿಶ್ವವಿದ್ಯಾನಿಲಯದ ಮಟ್ಟದಲ್ಲಿ ಅತಿ ಹೆಚ್ಚು ಅಂಕ ಪಡೆದ ಶಿಕ್ಷಕರ/ನಿವೃತ್ತ ಶಿಕ್ಷಕರ ಮಕ್ಕಳಿಗೆ "ಪ್ರತಿಭಾವಂತ ವಿದ್ಯಾರ್ಥಿ ವೇತನ" ವನ್ನು ಮಂಜೂರು ಮಾಡುವ ಸಲುವಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

2013–14 ನೇ ಸಾಲಿನ ಮಾರ್ಚ್/ಏಪ್ರಿಲ್ –2014 ರಲ್ಲಿ ನಡೆದ ಎಸ್.ಎಸ್.ಎಲ್.ಸಿ. ದ್ವಿತೀಯ ಪಿ.ಯು.ಸಿ. (ಕಲಾ/ವಿಜ್ಞಾನ/ವಾಣಿಜ್ಯ/ವೃತ್ತಿಪರ ಶಿಕ್ಷಣ ಅಂತಿಮ ಪದವಿ ಪರೀಕ್ಷೆ ಬಿಎ/ಬಿಕಾಂ.ಬಿಎಸ್ಸಿ/ಬಿಎಡ್/ಬಿಬಿಎಂ/ಬಿಹೆಚ್ಎಂ/ಬಿಸಿಎ ಅಂತಿಮ ಪೂರ್ವ ಪರೀಕ್ಷೆ (ಬಿಇ/ಎಂಬಿಬಿಎಸ್) ಪ್ರಥಮ ವರ್ಷದ ಸ್ನಾತಕೋತ್ತರ ಪರೀಕ್ಷೆ (ಎಂಎ/ಎಂಎಸ್ಸಿ/ಎಂಕಾಂ/ಎಲ್.ಎಲ್.ಬಿ.) ಪರೀಕ್ಷೆಗಳಲ್ಲಿ ಕನಿಷ್ಠ ಶೇಕಡ 60 ಅಂಕ ಪಡೆದ ವಿದ್ಯಾರ್ಥಿಗಳು ನಿಗಧಿತ ಅರ್ಜಿಗಳನ್ನು ತಮ್ಮ "ಧೃಢೀಕರಿಸಿದ ಅಂಕ ಪಟ್ಟಿಯೊಂದಿಗೆ" ಮೇಲ್ಕಂಡ ವಿಳಾಸಕ್ಕೆ ಸಲ್ಲಿಸಬಹುದಾಗಿದೆ.

ಅರ್ಜಿಗಳನ್ನು ಪರಿಶೀಲಿಸಿ ಮೆರಿಟ್ ಆಧಾರದ ಮೇಲೆ ವಿದ್ಯಾರ್ಥಿ ವೇತನ ಬಿಡುಗಡೆ ಮಾಡಲಾಗುವುದು. ಅರ್ಜಿ ನಮುನೆಯನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ ಅಂತರ್ಜಾಲದಿಂದ (www.schooleducation.kar.nic.in) ಡೌನ್‌ಲೋಡ್ ಮಾಡಿಕೊಳ್ಳಬಹುದು ಅಥವಾ ಜೆರಾಕ್ಸ್ ಪ್ರತಿಯಲ್ಲಿಯೂ ಸಹ ಸಲ್ಲಿಸಬಹುದು. ಭರ್ತಿ ಮಾಡಿದ ಅರ್ಜಿಗಳನ್ನು ನಿಧಿಗಳ ಕಚೇರಿಗೆ ತಲುಪಿಸಲು ಅಂತಿಮ ದಿನಾಂಕ 31.10.2014 ಆಗಿರುತ್ತದೆ. ತಡವಾಗಿ ಬರುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಹೆಚ್‌ಪಿ:ಜಿಪಿಆರ್.